ಶ್ರೀ ಜೆ. ದೇವಜ್ಜಿ.—ವಿಧಾನಸಭೆಗೆ ಕಾರನ್ನು ತೆಗೆದುಕೊಂಡು ಬರುವಾಗ ಅದರ ಖರ್ಚನ್ನು ಯಾರು ವಹಿಸುತ್ತಾರೆ ?

Sri KONDAJJI BASAPPA.—I am not aware of it.

ಶ್ರೀ ಜೆ. ದೇವಯ್ಯ.—ಈ ಕಾರಿಗೆ ಡ್ರೈವರನ್ನು ಕೊಟ್ಟಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೊಟ್ಟಿದ್ದೇವೆ.

ಶ್ರೀ ಜೆ. ದೇವಯ್ಯ.—ಕಾರ್ಖಾನೆಯ ಕೆಲಸಗಾರರಿಗೂ ಮತ್ತು ಅಧ್ಯಕ್ಷರಿಗೂ ಭಿನ್ನಾಭಿಪ್ರಾಯ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ, ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಚೇರ್ಮನ್ ಅದವರು ಈ ಸಭೆಯ ಸದಸ್ಯರಾಗಿದ್ದು, ಈ ಮಾನ್ಯ ಸಭೆ ನಡೆಯುವ ಕಾಲದಲ್ಲಿ ಅವರಿಗೆ ಕೊಟ್ಟಿರುವ ಕಾರನ್ನು ಉಪಯೋಗಿಸುತ್ತಿರುವುದು ಕಂಡುಬಂದರೆ ಸರ್ಕಾರದವರು ಅವರ ಮೇರ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

Mr. SPEAKER.—It is purely hypothetical.

Tanks repaired under the Pilot Project Scheme in Bagepalli Taluk.

*Q.—302. Sri B. SUBBARAYAPPA (Bagepalli).—

Will the Government be pleased to state :—

(*a*) the number of tanks repaired so far under the pilot project scheme in Bagepalli Taluk ;

(*b*) the amount of grants sanctioned so far, for the same in the said Taluk ?

*A.—Sri RAMAKRISHNA HEGDE (Minister for Development, Panchayatiaj and Co-operation).—

(*a*) Two.

(*b*) During 1962-63 :— Rs. 8,000.
During 1963-64 :— Rs. 50,000.

1-00 P.M.

ಶ್ರೀ ಬಿ. ಸುಬ್ಬರಾಯಪ್ಪ.—ಈ ಪೈಲಟ್ ಯೋಜನೆಯಲ್ಲಿ ಎರಡು ಕೆರೆಗಳನ್ನು ರಿಪೇರಿ ಮಾಡರಾಗಿದೆ ಎಂದು ಹೇಳಿದ್ದೀರಿ, ರಿಪೇರಿ ಮಾಡುವ ಉದ್ದೇಶವೇನು ?

ಶ್ರೀ ರಾಮಕೃಷ್ಣ ಹೆಗಡೆ.—ನಾದುರಸ್ತಿನಲ್ಲರುವ ಕೆರೆಗಳ ದುರಸ್ತು ಮಾಡಿ ನೀರಿಲ್ಲದಿರುವ ಕೆರೆಗಳಲ್ಲಿ ನೀರು ಕೊಡಿನಬೇಕೆಂಬುದು. ಅಲ್ಲಿ ಒಟ್ಟು 11 ಕೆರೆಗಳ ದುರಸ್ತಿ ಕೆಲಸವನ್ನು ತೆಗೆದು ಕೊಂಡಿದ್ದಾರೆ ; ಈ ಯೋಜನೆಯ ಮತ್ತೊಂದು ಉದ್ದೇಶವೇನೆಂದರೆ, ವ್ಯವಸಾಯ ನಡೆಯದೇ ಯಿರುವ ಕಾಲದಲ್ಲಿ ರೈತರಿಗೆ ಕೆಲಸಕ್ಕೆ ಅವಕಾಶ ಮಾಡಿಕೊಡಬೇಕು ; ಆ ಕೆಲಸ ರಚನಾತ್ಮಕ ಕೆಲಸವಾಗಬೇಕು ಮತ್ತು ವ್ಯವಸಾಯಕ್ಕೆ ಅನುಕೂಲವಾಗುವಂತಹ ಕೆಲಸವಾಗಿರಬೇಕು.

ಶ್ರೀ ಬಿ. ಸುಬ್ಬರಾಯಪ್ಪ.—ಕೆರೆಗಳಿಗೆ ತೂಬು ಇಡದೆ ರಿಪೇರಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಸುಬ್ಬರಾಯಪ್ಪ.—ಒಂದು ಕೆರೆಗೂ ತೂಬಿಲ್ಲದೆ ರಿಪೇರಿ ಕೆಲಸ ಮಾಡುತ್ತಿದ್ದಾರೆಂಬುದನ್ನು ಗಮನಕ್ಕೆ ತಂದಿದ್ದೇನೆ..... .....

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕೆರೆ ಎಂದು ಹೇಳಿದರೆ ನೋಡುತ್ತೇನೆ.

ಶ್ರೀ ಬಿ. ಸುಬ್ಬರಾಯಪ್ಪ.—ಮೂರು ಕೆರೆಗಳಿಗೆ ತೂಬಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ಅವುಗಳ ಹೆಸರನ್ನು ತಿಳಿಸಿದರೆ ನೋಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಪೈಲಟ್ ಯೋಜನೆಯಲ್ಲಿ ಯಾವ ಕೆರೆಗಳನ್ನು ದುರಸ್ತಿ

ಮಾಡಬೇಕೆಂದು ಮಾಡುತ್ತಾರೋ ಅವಕ್ಕೆ ಒದಗಿಸುವ ಹಣದಲ್ಲಿ ಶೇಕಡ 75 ರಷ್ಟನ್ನು ಮಣ್ಣು ಕಾಮಗಾರಿಗೆ ಮತ್ತೆ 25 ರಷ್ಟನ್ನು ತೂಬು ಮತ್ತು ರಿವೆಟ್‌ಮೆಂಟ್ ಕಟ್ಟುವುದಕ್ಕೆ ವಿನಿಯೋಗ ಮಾಡಬೇಕೆಂದು ತಮ್ಮ ಆಶೆಯಲ್ಲಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತೂಬಿಲ್ಲದೆ ಕೆರೆಯ ನೀರನ್ನು ಅಚ್ಚುಕಟ್ಟಿಗೆ ಹೇಗೆ ತರುವುದು ?

ಶ್ರೀ ರಾಮಕೃಷ್ಣ ಹೆಗಡೆ.—ತೂಬಿಲ್ಲದಿರುವ ಕೆರೆಗಳೂ ಕೆಲವಿವೆಯೆಂದು ನನ್ನ ಸ್ನೇಹಿತರು ಹೇಳುತ್ತಾರೆ ; ಇಂತಹ ಕೆರೆಗಳ ಕೆಳಗೆ ಸೀಪೇಜ್ ನೀರಿನಿಂದ ವ್ಯವಸಾಯವಾಗುತ್ತದೆ.

ಶ್ರೀ ಬಿ. ಸುಬ್ಬರಾಯಪ್ಪ.—1963-64 ರಲ್ಲಿ 11 ಕೆರೆಗಳನ್ನು ರಿಪೇರಿಗೆ ತೆಗೆದ ಕೊಳ್ಳಲಾಗಿದೆ ಎಂದು ಹೇಳಿದಿರಿ, ಅವುಗಳ ರಿಪೇರಿಯಾಗಬೇಕಾದರೆ ಇನ್ನೂ ಎಷ್ಟು ದಿನಗಳಾಗುತ್ತವೆ ?

ಶ್ರೀ ರಾಮಕೃಷ್ಣ ಹೆಗಡೆ.—ಆದಷ್ಟು ಬೇಗ ರಿಪೇರಿ ಮಾಡಬೇಕೆಂಬುದು ನಮ್ಮ ಉದ್ದೇಶ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಪ್ಯೂಲೆಟ್ ಯೋಜನೆಯನ್ನು ಕೋಲ್ಲಾರ ಜಿಲ್ಲೆಗೆ ಮಾತ್ರ ಕೊಡುವುದಕ್ಕೆ ಕಾರಣವೇನು ? ಅದಕ್ಕಿಂತ ಕಡಮೆ ಮಳೆ ಬೀಳುವ ತುಮಕೂರು ಜಿಲ್ಲೆಗೆ ಕೊಡದಿರಲು ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ತುಮಕೂರು ಜಿಲ್ಲೆಗೂ ಕೊಟ್ಟಿದ್ದೇವೆ ; ಮಾನ್ಯ ಸದಸ್ಯರಿಗೆ ಗೊತ್ತಿಲ್ಲ.

Complaints regarding the unsatisfactory administration of the Mysore State Cotton Apex Weavers' Co-operative Society, Bangalore.

*Q.—306. **Sri H. D. DEVE GOWDA** (Holenarasipur).—

Will the Government be pleased to state :—

(*a*) whether they have received any complaints regarding the unsatisfactory administration of the Mysore State Cotton Apex Weavers' Co-operative Society Ltd., Bangalore and if so, the nature of complaints received ;

(*b*) whether it has come to their notice that the Society in its general body meeting held during this year had passed a resolution requesting Government to waive the loss incurred by the Society on account of unsatisfactory administration ;

(*c*) whether they would take suitable steps to supersede the Society and to hold an enquiry by a senior I.A.S. Officer with a view to set right the irregularities existing in the Society ?

*A.—**Sri KONDAJJI BASAPPA** (Deputy Minister for Co-operation).—

(*a*) Yes. The Complaints relate to mismanagement, misuse of funds, shortages, etc.

(*b*) No.

(*c*) The complaints are being enquired into by the Registrar of Co-operative Societies. Necessary action will be taken as per Rules.

ಶ್ರೀ ಎಚ್. ಡಿ. ದೇವೇಗೌಡ.—ಆಡಿಟ್‌ಫಿಷಿಯಲ್ ಸಿಲ್ಕನ್ನು ಕಾಳಸಂತೆಯಲ್ಲಿ ಮಾರುವುದು ತಮ್ಮ ಗಮನಕ್ಕೆ ಬಂದಿದೆಯ ?

†ಶ್ರೀ ಕೊಂಡಜ್ಜಿ ಬಸಪ್ಪ.—ದೂರು ಬಂದಿದೆ.

Sri G. V. GOWDA.—Has any audit been conducted and has the audit disclosed any misuse of funds, shortages, etc., and if so, what is the quantum of money involved ?